## ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 859

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

03. ಉತ್ತರಿಸುವ ದಿನಾಂಕ : 26-12-2022

04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳ್ಳತನವಾದ ಮೊಬೈಲ್‌ಗಳನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು; | **ಕಳ್ಳತನವಾದ ಮೊಬೈಲ್‌ಗಳನ್ನು ಪತ್ತೆ ಹಚ್ಚಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ:**<br>1) ಕಳುವಾದ ಮೊಬೈಲ್‌ಗೆ ಸಂಬಂಧಿಸಿದಂತೆ ಸಿಡಿಆರ್/ಐಎಂಇಐ ನಂಬರ್‌ಗಳ ಬಳಕೆಯಾಗುತ್ತಿರುವ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಸರ್ವೀಸ್ ಪ್ರೊವೈಡರ್‌ಗಳಿಂದ ಸಂಗ್ರಹಿಸಲಾಗುತ್ತಿದೆ.<br>2) ಕೃತ್ಯ ನಡೆದ ಸ್ಥಳದ ಸುತ್ತಮುತ್ತ ಲಭ್ಯವಿರುವ ಸಿಸಿಟಿವಿ ಪೂಟೇಜ್‌ಗಳ ಮಾಹಿತಿಯನ್ನು ಸಂಗ್ರಹಿಸಿ ಆರೋಪಿತನ ಪತ್ತೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br>3) ಈ ಹಿಂದೆ ಇಂತಹ ಕೃತ್ಯದಲ್ಲಿ ಭಾಗಿಯಾಗಿರುವ ಎಂ.ಓ. ಆಸಾಮಿಗಳ ಮಾಹಿತಿ ಸಂಗ್ರಹಿಸಿ ವಿಚಾರಣೆ ನಡೆಸಲಾಗುತ್ತಿದೆ.<br>4) ಕಳುವಾದ ಮೊಬೈಲ್‌ಗಳನ್ನು ಮಾರಾಟ ಮಾಡುವ ಸ್ಥಳಗಳ ಮೇಲೆ ಸೂಕ್ತ ನಿಗಾವಹಿಸಿ ಮಾಹಿತಿ ಸಂಗ್ರಹಿಸಲಾಗುತ್ತಿದೆ.<br>5) ಮೊಬೈಲ್ ಟ್ರಾಕರ್, ಎಂ.ಸಿ.ಸಿ.ಟಿ.ಎಸ್. ಮತ್ತು ಲಭ್ಯವಿರುವ ಇತರೆ ತಂತ್ರಾಂಶಗಳ ಮೂಲಕ ಕಳುವಾದ ಮೊಬೈಲ್‌ಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ | ಇ-ಲಾಸ್ಟ್ ಎಂಬ ಸಾಫ್ಟ್‌ವೇರ್ (ತಂತ್ರಜ್ಞಾನ) ಅನ್ನು ಬೆಂಗಳೂರಿನಲ್ಲಿ ಮಾತ್ರವೇ ಏಕೆ ಕಾರ್ಯರೂಪಕ್ಕೆ ತರಲಾಗಿದೆ; ಇನ್ನುಳಿದ ಜಿಲ್ಲೆಗಳಲ್ಲಿ ಈ ತಂತ್ರಜ್ಞಾನವನ್ನು ಯಾವಾಗ ಅಳವಡಿಸಲಾಗುವುದು; | ಬೆಂಗಳೂರು ಸೇರಿದಂತೆ, ರಾಜ್ಯಾದ್ಯಂತ ಈಗಾಗಲೇ ಸದರಿ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸಲಾಗಿದೆ. |

-2

ಇಲ್ಲಿಯವರೆಗೆ ಈ ಇ-ಲಾಸ್ಟ್ ತಂತ್ರಜ್ಞಾನದ ಮೂಲಕ ದಾಖಲಾದ ಪ್ರಕರಣಗಳು ಎಷ್ಟು; ಇಲ್ಲಿಯವರೆಗೆ ಎಷ್ಟು ಪ್ರಕರಣಗಳು ಇತ್ಯರ್ಥವಾಗಿ ಎಷ್ಟು ಮೊಬೈಲ್‌ಗಳನ್ನು ಸಾರ್ವಜನಿಕರಿಗೆ ಹಿಂದಿರುಗಿಸಲಾಗಿದೆ?

ಬೆಂಗಳೂರು ನಗರದಲ್ಲಿ ಇ-ಲಾಸ್ಟ್ ತಂತ್ರಜ್ಞಾನದ ಮೂಲಕ ದಾಖಲಾದ ಪ್ರಕರಣಗಳು, ಇತ್ಯರ್ಥವಾದ ಪ್ರಕರಣಗಳು ಮತ್ತು ಮೊಬೈಲ್‌ಗಳನ್ನು ಹಿಂದಿರುಗಿಸಿರುವ ಬಗ್ಗೆ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| ದಾಖಲಾದ ಪ್ರಕರಣಗಳ ಸಂಖ್ಯೆ | ಇತ್ಯರ್ಥವಾದ ಪ್ರಕರಣಗಳ ಸಂಖ್ಯೆ | ಹಿಂದಿರುಗಿಸಲಾಗಿರುವ ಮೊಬೈಲ್ ಸಂಖ್ಯೆ |
|---|---|---|
| 513365 | 11542 | 9938 |

ಕಳ್ಳತನದ ಮೊಬೈಲ್ ಪೋನ್‌ಗಳ ಸಿಮ್ ಕಾರ್ಡ್‌ಗಳನ್ನು ಮತ್ತು ಮೊಬೈಲ್ ಪೋನ್‌ಗಳ ಐ.ಎಂ.ಇ.ಐ. ನಂಬರ್‌ಗಳನ್ನು ನಿಷ್ಕ್ರಿಯಗೊಳಿಸಲು ಘನ ಕೇಂದ್ರ ಸರ್ಕಾರವು DoT (Department of Telecommunications) ಇಲಾಖೆಯಿಂದ ತಂತ್ರಾಂಶ (Central Equipment Identity register (CEIR) Software Application) ಅನ್ನು ಅಭಿವೃದ್ಧಿಪಡಿಸಿದ್ದು ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ ಕಾರ್ಯಾರಂಭ ಮಾಡಿದೆ.

HD 73 PCQ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು.